# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 20.01.2022 ರಂದು ಮದ್ಯಾಹ್ನ 2.30 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1. ಡಾ|| ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಶ್ರೀಮತಿ. ನಿರ್ಮಲ, ಕಂದಾಯ ವಸೂಲಿಗಾರರು ಮತ್ತು ಕಾರ್ಯದರ್ಶಿಗಳು,
3. ಶ್ರೀ. ದೀಪಕ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ. ಶ್ರೀನಿವಾಸ್, ಹಿರಿಯ ಆರೋಗ್ಯ ಪರಿವೀಕ್ಷಕರು, ಪಶುಪಾಲನೆ.
5. ನಾರಾಯಣ, ಹಿರಿಯ ಆರೋಗ್ಯ ಪರಿವೀಕ್ಷಕರು.
6. ಮಣಿ ಮೇಘಾಲಯ್ಯೆ, ಕಿರಿಯ ಆರೋಗ್ಯ ಪರಿವೀಕ್ಷರು
7. ದೇವರಾಜ್, ಮೇಲ್ವಿಚಾರಕರು
8. ನಾರಾಯಣಸ್ವಾಮಿ, ಮೇಲ್ವಿಚಾರಕರು
9. ನಾಗರಾಜು, ಸೂಪರ್‌ವೈಸರ್
10. ಮುತ್ಯಾಲಪ್ಪ, ಸೂಪರ್‌ವೈಸರ್
11. ದಾಕ್ಷಾಯಿಣಿ ಲಿಂಕ್ ವರ್ಕರ್
12. ಪ್ರಮೀಳ ಲಿಂಕ್ ವರ್ಕರ್
13. ನವೀನ್, ವಾರ್ಡ್ ಮಾರ್ಷಲ್

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ. ನಾರಾಯಣ್ ರವರು ಮಾತನಾಡಿ ವಾಡ್ ನಂ. 42 ಲಕ್ಷ್ಮಿದೇವಿನಗರದಲ್ಲಿ ಒಟ್ಟು 6 ಟೆಸ್ಟಿಂಗ್ ಟೀಮ್‌ಗಳಿದ್ದು, ಸರಾಸರಿ ಒಂದು ದಿನಕ್ಕೆ 500 ರಿಂದ 600 ಜನರಿಗೆ ಕೋವಿಡ್ ಪರೀಕ್ಷೆಯನ್ನು ನಡೆಸಲಾಗುತ್ತಿರುತ್ತದೆ. ಹಾಗೂ ಪಾಸಿಟಿವಿಟಿ ರೇಟ್ ಶೇ12 ರಷ್ಟು ಇದ್ದು, ಕಳೆದ ಒಂದು ವಾರದಲ್ಲಿ 82 ವರ್ಷದ ವಯೋವೃದ್ಧರು ಕೋವಿಡ್ 19 ನಿಂದ ಮೃತಪಟ್ಟಿರುತ್ತಾರೆ, ಎಂಬ ಮಾಹಿತಿಯನ್ನು ಸಭೆಗೆ ನೀಡಿದರು.

ಕೋವಿಡ್ 19 ನಿಂದ ಮೃತಪಟ್ಟ ಕುಟುಂಬಗಳಿಗೆ ಪರಿಹಾರ ನೀಡುವ ಅರ್ಜಿಗಳು 20 ಬಾಕಿ ಇದ್ದು, ಬಿ.ಯು ನಂಬರ್ ಅಪಡೇಟ್ ಗಾಗಿ ಕೇಂದ್ರ ಕಛೇರಿ ವಾರ್ ರೂಂ ಗೆ ಕಳುಹಿಸಲಾಗಿದೆ ಎಂದು ತಿಳಿಸಿದರು, ಪಾಸಿಟೀವ್ ಬಂದು ಹೋಂ ಐಸೋಲೇಷನ್‌ನಲ್ಲಿರುವ ವ್ಯಕ್ತಿಗಳಿಗೆ ಔಷಧಿ ಕಿಟ್‌ನ್ನು ಒದಗಿಸಲಾಗುತ್ತಿರುತ್ತದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ. ನಾರಾಯಣ್ ರವರು ಸಭೆಗೆ ತಿಳಿಸಿದರು.

ಶ್ರೀ. ನಾರಾಯಣ್ ಮೇಲ್ವಿಚಾರಕರು ಮಾತನಾಡಿ ರಸ್ತೆ ಬದಿಯಲ್ಲಿ ಮರ ಕಡಿದು ರಸ್ತೆಯಲ್ಲೆಯೇ ಬಿಟ್ಟು ಹೋಗಿರುತ್ತಾರೆ ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುತ್ತದೆ. ಎಂದು ದೂರಿದರು. ಅಧ್ಯಕ್ಷರು ರವರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರೇ ವಿಲೇವಾರಿ ಮಾಡಬೇಕಾಗಿರುವುದರಿಂದ ಬೆಸ್ಕಾಂ ಇಲಾಖೆಯವರು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ)**

ಬೆಸ್ಕಾಂ ಇಲಾಖೆಯ ಸಹಾಯಕ ಇಂಜಿನಿಯವರ್ ರವರು ಮಾತನಾಡಿ ಬೆಸ್ಕಾಂ ಇಲಾಖೆ ಅನುಮತಿ ಪಡೆಯದೆ ಯಾವುದೇ ಸ್ಟ್ರೀಟ್ ಲೈಟ್‌ಗಳನ್ನು ಹಾಕಬಾರದು ಮತ್ತು ಮೀಟರ್‌ಗಳನ್ನು ತೆಗೆಯಬಾರದು ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಬಿಬಿಎಂಪಿ ವಿದ್ಯುಚ್ಚಕ್ತಿ ಇಲಾಖೆಯವರಿಗೆ ಮುಂದೆ ಈ ರೀತಿ ಘಟನೆಗಳು ಮರುಕಳಿಸಬಾರದು ಎಂದು ತಿಳಿಸಿದರು.

**ಕ್ರಮ: ವಿದ್ಯುಚ್ಚಕ್ತಿ ಇಲಾಖೆ(ರಾಜರಾಜೇಶ್ವರಿನಗರ)**

ಶ್ರೀ. ಶಶಿಕುಮಾರ್ ರವರು ಮಾತನಾಡಿ ಆರ್.ವಿ. ಶಾಲೆ ಹತ್ತಿರ ಸ್ಟ್ರೀಟ್ ಲೈಟ್‌ಗಳನ್ನು ಹಾಕಿಕೊಡಬೇಕೆಂದು ಕೋರಿದರು.

**ಕ್ರಮ: ವಿದ್ಯುಚ್ಚಕ್ತಿ ಇಲಾಖೆ(ರಾಜರಾಜೇಶ್ವರಿನಗರ)**

ಕಿರಿಯ ಆರೋಗ್ಯ ಪರಿವೀಕ್ಷಕರು ಮಣಿಮೇಘಲೈ ರವರು ಮಾತನಾಡುತ್ತಾ ಪೌರ ಕಾರ್ಮಿಕರನ್ನು ದೊಡ್ಡರಸ್ತೆ ಕಸಗುಡಿಸಲು ಬೆಳಿಗ್ಗೆ ಕಳುಹಿಸಿ, 11 ಗಂಟೆಯ ನಂತರ ಅಡ್ಡರಸ್ತೆಗಳನ್ನು ಸ್ವಚ್ಚಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀಮತಿ. ಅಮ್ಮು ರವರು ಮಾತನಾಡಿ ಕೆಂಪಮ್ಮ ಬಡಾವಣೆಯಲ್ಲಿ ವಿದ್ಯುತ್ ಕಂಬದಲ್ಲಿ ಹದಗೆಟ್ಟಿರುವ ಲೈನ್‌ಗಳನ್ನು ಸರಿಪಡಿಸಿಕೊಡಬೇಕೆಂದು ಕೇಳಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ)**

ಶ್ರೀ. ಮಂಜುನಾಥ್ ರವರು ಮಾತನಾಡುತ್ತಾ ವೀಣಾ ಶಾಲೆ ಎದುಗಡೆ ಮೋರಿ ಸ್ಲ್ಯಾಬ್‌ಗಳು ಹಾಳಾಗಿದ್ದು,ಸಾರ್ವಜನಿಕರಿಗೆ ಓಡಾಡಲು ತೊಂದರೆ ಉಂಟಾಗುತ್ತಿದ್ದು, ಸರಿಪಡಿಸಿಕೊಡಲು ಕೋರಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ)**

ಶ್ರೀ.ನಾರಾಯಣ್ ಮೇಲ್ವಿಚಾರಕರು ರವರು ಮಾತನಾಡಿ ಪೌರಕಾರ್ಮಿಕರಿಗೆ ಶೌಚಾಲಯ ಮತ್ತು ವಿಶ್ರಾಂತಿ ಕೊಠಡಿ ಇಲ್ಲ, ಇಸ್ಕಾನ್‌ನಿಂದ ಊಟ ಬರುತ್ತಿದ್ದು, ರಸ್ತೆಯಲ್ಲಿ ಕುಳಿತು ಮಾಡುತ್ತಿದ್ದು, ಅವರಿಗೆ ವ್ಯವಸ್ಥೆ ಮಾಡಿಕೊಡಬೇಕೆಂದು ತಿಳಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮಾನ್ಯ ಕಾರ್ಯದರ್ಶಿಗಳು ಮುಕ್ತಾಯಗೊಳಿಸಿದರು.

Nirmala K

(ಶ್ರೀಮತಿ. ನಿರ್ಮಲ)
ಕಂದಾಯ ವಸೂಲಿಗಾರರು
ಮತ್ತು ಕಾರ್ಯದರ್ಶಿ

(ಡಾ|| ಎಂ. ಜಿ. ಹಳ್ಳಿ ಶಿವರಾಮ್)
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು